◆ ಸಿನಿಮಾಗೆ ಯಾವ ರೀತಿಯ ತಯಾರಿ ಮಾಡಿಕೊಂಡಿದ್ದೀರಿ?

ಬೆನ್ನಿಯಲ್ಲಿ ನನ್ನದು ಎರಡು ಆಯಾಮಗಳಿರುವ ಪಾತ್ರ. ಸೆಂಟಿಮೆಂಟ್ ಆಗಿಯೂ ಕಾಣಬೇಕು, ಆಕೆಯ ಭಾವನೆಗಳಿಗೆ ಧಕ್ಕೆಯಾದಾಗ ಎದ್ದು ನಿಲ್ಲುವಂಥ ಹೆಣ್ಣುಮಗಳ ಪಾತ್ರವೂ ಆಗಿರಬೇಕು. ಹೀಗಾಗಿ ಎರಡು ಆಯಾಮಗಳಿಂದ ನನ್ನನ್ನು ನಾನು ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಸಿನಿಮಾದಲ್ಲಿ ಸುದೀಪ್ ಸರ್ ಧ್ವನಿ ಇದೆ. ಫೈಟ್ ದೃಶ್ಯಗಳು ಹೆಚ್ಚಿರುವುದರಿಂದ ರಿಹರ್ಸಲ್ ಜೋರಾಗಿದೆ. ಡಯೆಟ್‌ನಲ್ಲಿ ಸ್ಟ್ರಿಕ್ಟ್ ಇದ್ದೇನೆ. ತುಂಬಾ ಜವಾಬ್ದಾರಿಯುತ ಪಾತ್ರವಾದ್ದರಿಂದ ಹೆಚ್ಚಿನ ತಯಾರಿಯೂ ಸಾಗಿದೆ.

◆ ನಿಮ್ಮ ಮೊದಲ ಸಿನಿಮಾಗೆ ಹೋಲಿಸಿದರೆ, ಪ್ರಸ್ತುತ ಕನ್ನಡ ಸಿನಿಮಾರಂಗದಲ್ಲಿ ನೀವು ಗಮನಿಸಿರುವ ಬದಲಾವಣೆ?

ಕನ್ನಡದಲ್ಲಿ ಹೆಚ್ಚು ಸಿನಿಮಾದಲ್ಲಿ ನಟಿಸಿಲ್ಲದ ಕಾರಣ ತೀರಾ ಆಳವಾಗಿ ವಿಶ್ಲೇಷಣೆ ಮಾಡಲು ಸಾಧ್ಯವಿಲ್ಲ. ಆದರೆ ಹಲವು ಬದಲಾವಣೆಗಳಂತೂ ಕಾಣುತ್ತಿವೆ. ತಾಂತ್ರಿಕವಾಗಿ ನೋಡಿದರೆ, ಈಗ ಎಲ್ಲ ಡಿಜಿಟಲ್ ಆಗಿದೆ.

ಕಂಟೆಂಟ್ ವಿಷಯ ನೋಡಿದರೆ, ಒಳ್ಳೊಳ್ಳೆಯ ಸಿನಿಮಾಗಳು ಕನ್ನಡದಲ್ಲಿ ರೂಪುಗೊಳ್ಳುತ್ತಿವೆ. ಬೇರೆ ಸಿನಿಮಾರಂಗದವರು ಈ ಕಡೆ ನೋಡುವಷ್ಟು ಬದಲಾವಣೆಗಳಾಗುತ್ತಿವೆ. ಹೊಸ ಹೊಸ ಯುವ ನಿರ್ದೇಶಕರು ಬರುತ್ತಿದ್ದಾರೆ. ಭಿನ್ನ ಪರಿಕಲ್ಪನೆಯ ಸಿನಿಮಾಗಳನ್ನು ಪರಿಚಯಿಸುತ್ತಿದ್ದಾರೆ. ಸಿನಿಮಾಗಳನ್ನು ಎಲ್ಲೆಡೆಯ ಪ್ರೇಕ್ಷಕರನ್ನೂ ಗಮನದಲ್ಲಿಟ್ಟುಕೊಂಡು ಮಾಡುತ್ತಿದ್ದಾರೆ. ಪ್ಯಾನ್ ಇಂಡಿಯಾ ಪರಿಕಲ್ಪನೆಯಲ್ಲಿ ಹಲವು ಸಿನಿಮಾಗಳು ಮೂಡಿಬರುತ್ತಿವೆ. ಅವು ಹಿಟ್ ಆಗುತ್ತಿವೆ ಕೂಡ.

ಜೊತೆಗೆ, ಸಾಮಾಜಿಕ ಜಾಲತಾಣಗಳ ಪ್ರಭಾವ ಹೆಚ್ಚಾಗಿರುವ ಕಾರಣ ಒಟಿಟಿಯೂ ಕೈ ಜೋಡಿಸಿರುವುದರಿಂದ ಸಿನಿಮಾಗಳ ಬಗ್ಗೆ ಮಾತನಾಡುವುದು ಹೆಚ್ಚಾಗಿದೆ. ಬಜೆಟ್, ಲಾಭ ದೊಡ್ಡ ಮಟ್ಟದಲ್ಲಿರುವುದರಿಂದ ಕನ್ನಡ ಸಿನಿಮಾಗಳು ಬೆಳವಣಿಗೆ ಕಾಣುತ್ತಿವೆ.

◆ ಯಾವ್ಯಾವ ಸಿನಿಮಾಗಳಲ್ಲಿ ತೊಡಗಿಕೊಂಡಿದ್ದೀರಿ?

ತಮಿಳಿನಲ್ಲಿ ಎರಡು ಸಿನಿಮಾಗಳನ್ನು ಮಾಡುತ್ತಿದ್ದೇನೆ. 'ಬೆನ್ನಿ'ಯಲ್ಲಿ ತೊಡಗಿಕೊಂಡಿದ್ದೇನೆ. ತೆಲುಗಿನಲ್ಲಿಯೂ ಎರಡು ಸಿನಿಮಾಗಳಿವೆ.

## ತೆರೆಗೆ ರೆಡಿ 'ಕೆಡಿ'




ಪ್ರೇಮ್ ನಿರ್ದೇಶನದ, ಧ್ರುವ ಸರ್ಜಾ ನಟನೆಯ ಬಹುನಿರೀಕ್ಷಿತ 'ಕೆಡಿ' ಸಿನಿಮಾ ಇದೇ ಅಕ್ಟೋಬರ್‌ನಲ್ಲಿ ತೆರೆಗೆ ಬರಲು ಸಜ್ಜಾಗುತ್ತಿದೆ.

'ಏಕ್ ಲವ್ ಯಾ' ಸಿನಿಮಾ ನಂತರ ಪ್ರೇಮ್ ನಿರ್ದೇಶನದ ಪ್ಯಾನ್ ಇಂಡಿಯಾ ಚಿತ್ರ ಇದಾಗಿದ್ದು, ಈಗಾಗಲೇ ಮುಂಬೈ, ಹೈದರಾಬಾದ್, ಚೆನ್ನೈ ಹಾಗೂ ಕೊಚ್ಚಿಯಲ್ಲಿ ನಾಲ್ಕು ಭಾಷೆಗಳಲ್ಲಿ ಟೀಸರ್ ರಿಲೀಸ್ ಮಾಡಲಾಗಿದೆ.

'1970–75ರ ಸಮಯದಲ್ಲಿ ನಡೆದ ನೈಜಘಟನೆ ಆಧಾರಿತ ಗ್ಯಾಂಗ್‌ಸ್ಟರ್ ಕಥೆ ಈ ಚಿತ್ರದ್ದಾಗಿದ್ದು, 'ಕೆಡಿ' ಅಂದ್ರೆ ಕಾಳಿದಾಸ. 1970ರ ದಶಕದಲ್ಲಿದ್ದ ಬೆಂಗಳೂರನ್ನು ಕಲಾ ನಿರ್ದೇಶಕ ಮೋಹನ್ ಬಿ. ಕೆರೆ ಅವರು ಮರುಸೃಷ್ಟಿಸಿದ್ದಾರೆ. ಸುಮಾರು 180 ದಿನ ಚಿತ್ರೀಕರಣ ನಡೆಸಿರುವ ತಂಡ ಇದೀಗ ಬಿಡುಗಡೆಯ ಸಿದ್ಧತೆ ಆರಂಭಿಸಿದೆ. ಇದೇ ಅಕ್ಟೋಬರ್‌ನಲ್ಲಿ 'ಕೆಡಿ' ಪ್ರೇಕ್ಷಕರ ಮುಂದೆ ಬರಲಿದೆ' ಎಂದು ಮಾಹಿತಿ ನೀಡಿದ್ದಾರೆ ನಿರ್ಮಾಪಕ ವೆಂಕಟ್ ನಾರಾಯಣ್.

ಚಿತ್ರದಲ್ಲಿ ರೀಷ್ಮಾ ನಾಣಯ್ಯ ನಾಯಕಿಯಾಗಿ ನಟಿಸಿದ್ದಾರೆ. ಬಾಲಿವುಡ್‌ನ ಸಂಜಯ್‌ದತ್, ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್, ನೋರಾ ಫತೇಹಿ ತಾರಾಗಣ ಚಿತ್ರಕ್ಕೆ ಮೆರುಗಾಗಿದೆ.

# ಕಾಮಿಡಿ ಒಲವಿನ ಸಂಪದ



'ಯಾವುದೇ ಪಾತ್ರ ಮಾಡುವಾಗ ಪ್ರಾಮಾಣಿಕವಾಗಿರುವುದು ತುಂಬಾ ಮುಖ್ಯ ಎಂಬುದನ್ನು ನಾನು ನಂಬಿದ್ದೇನೆ. ನಿಖರತೆ ಹಾಗೂ ಪ್ರಾಮಾಣಿಕತೆ ಯಾವುದೇ ಪಾತ್ರವನ್ನು ಸ್ಕ್ರೀನ್ ಮೇಲೆ ರಿಯಲ್ ಆಗಿ ಕಾಣಿಸುತ್ತದೆ. ಇದು ಪ್ರೇಕ್ಷಕರನ್ನು ಹತ್ತಿರಕ್ಕೆ ಸೆಳೆದುಕೊಳ್ಳುತ್ತದೆ' ಎಂದಿದ್ದಾರೆ ಯುವ ನಟಿ ಸಂಪದ ಹುಲಿವಾನ.

ಈಚೆಗೆ ಬಿಡುಗಡೆ ಕಂಡ 'ಎಕ್ಕ' ಸಿನಿಮಾದಲ್ಲಿ ಅಭಿನಯಿಸಿರುವ ನಟಿ ಸಂಪದ, ಆ ಸಿನಿಮಾದ ಕುರಿತು ತಮ್ಮ ಅನುಭವಗಳನ್ನು ಬಿಚ್ಚಿಟ್ಟಿದ್ದಾರೆ. "'ಎಕ್ಕ' ಸಿನಿಮಾ ಕಥೆ ನಿರೂಪಣೆ ಕೇಳುತ್ತಿದ್ದಂತೆ ಒಪ್ಪಿಕೊಂಡೆ. ಕಥೆ ಕೇಳುವಾಗ ನಾನೂ ಈ ಸಿನಿಮಾ ಭಾಗವಾಗಬೇಕು ಅನಿಸಿತು. ಯುವ ರಾಜ್‌ಕುಮಾರ್ ಹಾಗೂ ನಿರ್ದೇಶಕ ರೋಹಿತ್ ಪದಕಿ ಅವರೊಂದಿಗೆ ಕೆಲಸ ಮಾಡಬೇಕು ಎಂದು ಬಯಸಿದ್ದೆ. ಹಾಗೇ ಪಾತ್ರ ಒಲಿಯಿತು' ಎಂದು ಖುಷಿಯಿಂದ ಮಾತನಾಡಿದ್ದಾರೆ.

ತಾವು ಬಯಸುವ ಪಾತ್ರಗಳ ಕುರಿತು ಮಾತು ಹಂಚಿಕೊಂಡ ಅವರು, 'ನನಗೆ ಕಾಮಿಡಿ ಇಷ್ಟ. ಆದರೆ ನನ್ನನ್ನು ಭಯಪಡಿಸುವ ಜಾನರ್ ಕೂಡ ಅದೇ. ಅದನ್ನು ಎಕ್ಸ್‌ಪ್ಲೋರ್ ಮಾಡಲು ಬಯಸುತ್ತೇನೆ. ಜನರನ್ನು ನಗಿಸುವುದು ಸವಾಲು' ಎಂದಿದ್ದಾರೆ.

'ಪ್ರೀತಿ ಹಾಗೂ ಕುಟುಂಬದ ಹೊರತಾಗಿಯೂ ಮಹಿಳೆಯರಿಗೆ ಪಾತ್ರಗಳಿವೆ. ಅದನ್ನು ಹೆಚ್ಚು ಎಕ್ಸ್‌ಪ್ಲೋರ್ ಮಾಡುತ್ತಿಲ್ಲ. ಮಹಿಳೆಯರು ಆ್ಯಕ್ಷನ್ ಹೆವಿ ರೋಲ್‌ಗಳನ್ನು ಮಾಡಲು ಸಮರ್ಥರು. ಸಿನಿಮಾಗಳಲ್ಲಿ ಭಾವುಕತೆ ಇರಬೇಕು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅದಷ್ಟೇ ಮಹಿಳೆಯರು ಹೇಳುವಂಥ ಕಥೆಗಳಾಗಬಾರದು' ಎಂದು ತಮ್ಮ ನಿಲುವನ್ನು ಹಂಚಿಕೊಂಡಿದ್ದಾರೆ. ■